


**ಕನಸುಗಳು ಖಾಸಗಿ**
(ಕಥಾಸಂಕಲನ)
ಲೇ: ನರೇಂದ್ರ ಪೈ
ಪು: 100; ಬೆ: ರೂ. 90
ಪ್ರ: ಮನೋಹರ ಗ್ರಂಥ ಮಾಲಾ,
ಲಕ್ಷ್ಮಿ ಭವನ, ಸುಭಾಷ್ ರಸ್ತೆ,
ಧಾರವಾಡ – 580 001,
ದೂರವಾಣಿ: 98454 47002

ನೋಡುವ ಬೆಕ್ಕಿನ ಮರಿಗಳೂ, ಗುಬ್ಬಿಮರಿಯನ್ನು ತಿಂದುಹಾಕುವ ಒಂದು ಬೆಕ್ಕೂ ಅವನಿಗೆ ಜೀವನದ ಕಟುವಾಸ್ತವದ ಬಾಗಿಲು ತೆರೆಯುತ್ತವೆ. ಇಡೀ ಕತೆ ನಿಗೂಢ ವಾತಾವರಣವೊಂದನ್ನು ಸೃಷ್ಟಿಸಿದ್ದು ಇದರಲ್ಲಿ ಶೋಷಣೆಗಿರುವ ಆಕರ್ಷಕ ಮುಖವೊಂದು ಹೇಗೆ ತಟ್ಟನೆ ಗೋಚರಿಸುತ್ತದೆಯೆನ್ನುವುದಕ್ಕೆ ಹುಡುಗನ ಸ್ವಗತದಂತಿರುವ ಈ ಮಾತುಗಳು ಸಾಕು: "ಉನ್ನಿಕೃಷ್ಣನ್ ಮಾತ್ರ ಸತ್ಯಕ್ಕೂ ತುಂಬ ಪಾಪದವರು. ಅಕ್ಕನ ಜೊತೆ ಸಾಮಾನು ತರಲು ಹೋದಾಗಲೆಲ್ಲ ಡಬ್ಬಿ ಬೆಲ್ಲ ತೆಗೆದು ಹಿತ್ತಾಳೆಯ ತಂಬಿಗೆಗೆ ಹಾಕಿದ ನಂತರ ಕೈಯನ್ನು ಅದರ ಬಾಯಿಗಿಟ್ಟು ಗೀರದೆ ನನಗೇ ನೆಕ್ಕಲು ಕೊಡುತ್ತಿದ್ದರು. ಆಗ ನನಗೆ ಖುಷಿಯೋ ಖುಷಿ! ಎಷ್ಟು ದೊಡ್ಡ ಕೈ ಅವರದ್ದು! ನಾನು ಅವರ ಒಂದೊಂದೂ ಬೆರಳನ್ನು ನೆಕ್ಕೀ ನೆಕ್ಕೀ ನೀರ್ಬೆಲ್ಲ ಚೆಕ್ಕ ಮಾಡುವ ತನಕ ಅವರು ಸುಮ್ಮನೇ ನಗುತ್ತ ನಿಲ್ಲುತ್ತಿದ್ದರು."

ದೃಢ ನಿರ್ಧಾರವೊಂದನ್ನು ಕುರಿತ ಕತೆಯಾಗಿರುವಂತೆಯೇ ಜೀವನವಿಧಾನವೊಂದರ ವಿಮರ್ಶೆಯೂ ಆಗಿರುವ 'ರುಕ್ಕುಮಣಿ'ಯಲ್ಲಿ ತಾಯಿ, ಮಗಳು ಒಂದೇ ಮನೆಯಲ್ಲಿದ್ದೂ ಏಕಾಂಗಿಗಳು. ಕತೆಯ ವರ್ತಮಾನದಲ್ಲಿ ತಾಯಿ ಅಪ್ಪಿಯಮ್ಮನ ಗಂಡ ಕಾಣೆಯಾಗಿದ್ದಾನೆ. ಅವಳು ಸದಾ ಕೆಲಸಮಾಡುತ್ತ ತನ್ನ ಒಬ್ಬಂಟಿತನವನ್ನು ನೀಗಿಕೊಳ್ಳುತ್ತಿದ್ದಾಳೆ. ಮಗಳು ರುಕ್ಕುಮಣಿಗೆ ಅವಳ ವಯೋಸಹಜ ವಾಂಛೆಗಳಿಂದಾಗಿ ಅಕ್ರಮ ಸಂಬಂಧಗಳಿವೆ. ಈ ಇಬ್ಬರ ಎರಡು ಜಗತ್ತುಗಳು ಅನಾವರಣಗೊಳ್ಳುವುದು ಅಪ್ರಿಯ ಸತ್ಯವೊಂದು ಇದ್ದಕ್ಕಿದ್ದಂತೆ ಸ್ಫೋಟಗೊಂಡಾಗ. ನೀತಿ ಅನೀತಿಗಳ ಸಾಮಾಜಿಕ ಮೌಲ್ಯವನ್ನೇ ಸೂಕ್ಷ್ಮವಾಗಿ ಪರಿಶೀಲಿಸುವ ಈ ಕತೆಯಲ್ಲಿ ರುಕ್ಕುಮಣಿ ಮನೆ ತೊರೆದು ಯಾವುದೋ ಲಾಡ್ಜಿನಲ್ಲಿ ಸತ್ತಳೆಂಬ (ಅಸ್ಪಷ್ಟ) ಸೂಚನೆಯಿದೆ. ಗಂಡ ಇಲ್ಲದ, ಒಬ್ಬಳೇ ಮಗಳನ್ನು ಕಳೆದುಕೊಂಡ ಅಪ್ಪಿಯಮ್ಮನ ಬದುಕುವ ಛಲ ಒಂದಿಷ್ಟೂ ಕಡಿಮೆಯಾಗುವುದಿಲ್ಲ ಎಂಬ ಸೂಚನೆಯಿಂದ ಕತೆ ಮುಕ್ತಾಯಗೊಳ್ಳುತ್ತದೆ: "ಇವತ್ತು ನೋಡಿದರೆ ಅಪ್ಪಿಯಮ್ಮ ಬೆಳಿಗ್ಗೆ